(7) Notification No. S. O. 625, dated 26th February, 1977 Exemption of Road Tax for aviation Refueller No. DLH 9812 of Indian Oil Company Limited, Bangalore. under section 16(2) of Karnataka Motor Vehicles Taxation Act, 1957.

Sri MALLIKARJUNA KHARGE (Minister of State for Primary and Secondary Education).—I big to lay.

Annual Administration Report of theKarnataka Secondary Education Examination Board for the period from 1-8-1977 to 31-3-1977.

under sub-section 3 of Section 25 of the Karnataka Secondary Education Examination Board Act, 1966.

Sri D. K. Naikar (Minister for Municipal Administration and Political Pension)—I beg to lay on the Table the Agreement files pertaiing to Civil works in respect of.—

(1) Public Utility Buildings (pages 12+128-140)

(2) Jayanagar Shoping Complex (80 pages).

In pursuance of assurance held outby him while replying to Starred Question No. 117 (150) of Sri T. R. Shamanna on 21-4-1977.

MADAM SPEAKR.—All the Papers are laid on the table.

Admissions at the Kasturba Medical College Manipal and Mangalore.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಇವತ್ತಿನ ಪ್ರಜಾವಾಣಿ ಪತ್ರಿಕೆಯಲ್ಲಿ ಕೇಂದ್ರ ಸರ್ಕಾರಕ್ಕೆ ಸೇರಿದ ಇಂಡಿಯನ್ ಟೆಲಿಫೋನ್ ಕಾರ್ಖಾನೆಯ ಸರ್ಕ್ಯುಲರನ್ನು ಕೇವಲ ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಮಾತ್ರ ಕೊಟ್ಟಿದ್ದಾರೆ ಎನ್ನುವುದು ಪತ್ರಿಕೆಯಲ್ಲಿ ಇವತ್ತು ಬಂದಿದೆ. ಇದು ಸರಿಯಲ್ಲ, ಮೊನೆ ಕೂಡ ಈ ಸಭೆಯಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂದಿದೆ. ಆಗ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಉತ್ತರ ಕೊಟ್ಟರು. ಆದರಿಂದ ಇನ್ನು ಮುಂದಾದರೂ ಪ್ರಾಂತೀಯ ಭಾಷೆ ಮತ್ತು ಹಿಂದಿಯಲ್ಲಿ ಬರಬೇಕು. ಅವಶ್ಯಕತೆ ಇದ್ದರೆ ಆಂಗ್ಲ ಭಾಷೆಯಲ್ಲಿ ಇಂತಹ ಸುತ್ತೋಲೆಗಳನ್ನು ಕಳುಹಿಸುವಂತೆ ಮಾಡಬೇಕು. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಮ್ಮ ಕಳವಳವನ್ನು ವ್ಯಕ್ತಪಡಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎ ಕಕ್ಕಿಲಾಯ.—ಇದರ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ಕಳುಹಿಸಿದಾಗ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಗೊತ್ತಾಯಿತು. ಆದ್ದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರದವರ ಜೊತೆಯಲ್ಲಿ ಪತ್ರವ್ಯವಹಾರ ನಡೆಸುತ್ತಿದಾರೆಯೇ ಎನ್ನುವುದರ ಬಗ್ಗೆ ಕೇಳಿದ್ದಕ್ಕೆ ಪತ್ರವ್ಯವಹಾರ ನಡೆಸುತ್ತಿದ್ದೇವೆಂದು ಹೇಳಿದರು ಆದರೆ ಇವತ್ತಿನ ಪತ್ರಿಕೆಯನ್ನು ನೋಡಿದರೆ ಸಂಶಯ ಬರುತ್ತದೆ ಆದ್ದರಿಂದ ಈಗಲೂ ತಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ಪತ್ರವ್ಯವಹಾರ ನಡೆಸಿ ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ --ಇವತ್ತಿನ ಪೇಪರ್‌ನಲ್ಲಿ ಬಂದಿರುವುದನ್ನು ನಾನು ನೋಡಿದ್ದೇನೆ. ಅದು ಹಿಂದಿ ಮತ್ತು ಇಂಗ್ಲೀಷ್‌ನಲ್ಲಿ ಇದೆ ಅದನ್ನು ನಾನು ಒಪ್ಪಿ ಕೊಳ್ಳುತ್ತೇನೆ ಇದರ ಬಗ್ಗೆ ಸಂಬಂಧ ಪಟ್ಟವರ ಜೊತೆಯಲ್ಲಿ ವ್ಯವಹರಿಸಿ ಸಂಬಂಧಪಟ್ಟ ಮ್ಯಾನೇಜಿಂಗ್ ಡೈರೆಕ್ಟರ್‌ಗೆ ಕಾಗದ ಬರೆಸಿ ಕನಿಷ್ಟ ಮೂರು ಭಾಷೆಯಲ್ಲಿ ಅಂದರೆ ರೀಜಿನಲ್, ನ್ಯಾಷನಲ್ ಮತ್ತು ಇಂಟರ್‌ನ್ಯಾಷನಲ್ ಭಾಷೆಯಲ್ಲಿ ಬರುವಂತೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕಾಗೋಡು ಶಿವಪ್ಪ.-ಮಾನ್ಯ ಅಧ್ಯಕ್ಷರೇ ಮೊನ್ನೆ ಕಳೂರಿಬಾ ಮೆಡಿಕಲ್ ಕಾಲೇಜು ಬಗ್ಗೆ ಚರ್ಚೆಯಾಗಿ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದರು. ಈ ಮಧ್ಯೆ ಮೆಡಿಕಲ್ ಕಾಲೇಜಿನವರು ಪ್ರವೇಶ ಪತ್ರಗಳನ್ನು ಕರೆಯುವಾಗ ಎರಡು ಕಾಲೇಜುಗಳಿಗೆ ಪ್ರತ್ಯೇಕವಾಗಿ ಅರ್ಜಿಗಳನ್ನು ಕರೆದಿದ್ದಾರೆ. ಯಾವುದೇ ಕೆಲಸವನ್ನು ಪ್ರಿಸಿಪಿಟೇಟ್ ಮಾಡದ ರೀತಿಯಲ್ಲಿ ಒಂದೇ ಕಡೆ ಅರ್ಜಿ ಕರೆಯುವಂತೆ ಸರ್ಕಾರದವರು ನಿರ್ದೇಶನ ಕೊಡಬೇಕು. ಇದರಲ್ಲಿ ಯಾವುದೇ ತಪ್ಪು ತಿಳಿವಳಿಕೆ ಇರಬಾರದು ಆದ್ದರಿಂದ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ಕೊಟ್ಟು ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ,— ಸರ್ಕಾರದ ಧೋರಣೆ ಏನು ಇದೆ ಎನ್ನುವುದು ತಮಗೆಲ್ಲಾ ಗೊತ್ತಿದೆ. ಎರಡು ಕಾಲೇಜುಗಳು ಅಸ್ತಿತ್ವಕ್ಕೆ ಬಂದಿಲ ಅವು ಅಸ್ತಿತ್ವಕ್ಕೆ ಬರಬೇಕಾದರೆ ನಾವು ಹುಕುಂ ಕೊಟ್ಟಿಲ್ಲ. ಜೊತೆಗೆ ಮೊನ್ನೆ ಚರ್ಚೆ ನಡೆದಾಗ ಸಹಿತ ಅಸ್ತಿತ್ವಕ್ಕೆ ಬಂದಿರಲಿಲ್ಲ ಸದ್ಯದಲ್ಲಿ ನಾವು ಹುಕುಂ ಕೊಡುವವರೆಗೆ ಹೋದ ವರ್ಷವಿನು ಇತ್ತು ಅದೇ ವಂಂದು ವಿಯುಂತ್ತದೆ It is only the opinion of the department in pursuance of the recommendation made by the University. Until and unless the notification is issued under the University Act by the Government it will not come into effect, I say that no notification shall be issued. Under the circumstances, the question does not arise. The *statuquo* what was prevailing last year will continue.

SRI D. DEVARAJ URS.—There is no notification at all.

SRI K. PUTTASWAMY —The *statusque* should have a reference to the Government order issued in 1975 distri buting seats between Mangalore Section and Manipal Section erroneously. The *statusque* as it was before issuing the Government order should continue.

SRI H. M. CHANNABASAPPA.—The *statusque* will continue There will not be any two colleges; like Manipal centre and Mangalore centre.

SRI H. D. DEVE GOWDA.—The University has permitted this year to start anatomy and physiology sections, If that is not going to be started there, then the matter ends when once the anatomy and physiology Sections are permitted to function then, pre-clinical section is going to be divided for the newly admitted students in Mangalore Centre Then the question of new College will arise. If the earlier position is maintained then, we have no objection.

SRI H. M. CHANNABASAPPA.—The Mysore University has recommended that the anatomy and physiology arrangement may be made in the Manipal College. On that ground the Tecnical Committee also said. But we said 'No' That means we don't approve the recommendation.

SRI K.PUTTASWAMY.—What is the difficulty to tell definitely and clearly that there are no two Colleges, but only one College.

SRI KAGODU THIMMAPPA.—Here, they did one thing I may call it as mischief on 29-6-1977 the Kasthurba Medical College, Manipal called for applications for admission. and second time, the Chairman, Selection Committee and Additional Secretary to Health Department has called for applications for admission to the private Kasthurba Medical College, Mangalore.

ಶ್ರೀ ಎಚ್ ಎಂ ಚನ್ನಬಸಪ್ಪ.—ಇಲ್ಲಿ ತಾವು ಹೇಳಿದ ಬಗ್ಗೆ ಆ ಇಷ್ಯೂ ಬಂದಾಗ ಅಬ್ಜೆಕ್ಷನ್ ತೆಗೆದುಕೊಂಡಿದ್ದೀರಿ, ಜೊತೆಗೆ ಅದನ್ನು ಜಾರಿಗೆ ಕೊಟ್ಟಿಲ್ಲ. ನೋಟಿಫಿಕೇಷನ್ ಇಷ್ಯೂ ಮಾಡಿಲ್ಲ. ಮಾಡದೆ ಇರುವಾಗ ಅದು ಹೇಗೆ ಎರಡು ಕಾಲೇಜುಗಳು ಬರುತ್ತವೆ ? ನಾನು ವಾಗ್ದಾನ ಮಾಡಿದ್ದೇನೆ. ಇನ್ನು ಮೂರು ನಾಲ್ಕುದಿವಸದೊಳಗೆ ಮೀಟಿಂಗ್ ಕರೆದು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದೆ ಅವರು ಅರ್ಜಿ ಕರೆದರೂ ಅದು ಎರಡು ಕಾಲೇಜು ಎಂದು ಹೇಳುವುದಕ್ಕೆ ಬರುವುದಿಲ್ಲ. ಅದು ಕಾಲೇಜು ಪ್ರಶ್ನೆಯಲ್ಲ. And I will be making a statment immediately after that meeting.

SRI K. PUTTASWAMY.—I take that the Chairman, Selection Committee is also the Additional Director of the Health Department.

ಶ್ರಿ ಎಚ್. ಎಂ. ಚನ್ನಬಸಪ್ಪ.—ನಾನು ಅದನ್ನು ನೋಡಿಲ್ಲ, ಆ ರೀತಿ ಏನಾದರೂ ಇದ್ದರೆ ಸ್ಪಷ್ಟ ಪಡಿಸುತ್ತೇನೆ.

Taking up a Police under Rule 146

ಶ್ರೀ ಎಚ್ ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಮೂರು ಗಂಟೆಗೆ ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದರು ನಾವು ರೂಲ್ ೧೪೬ ಕೆಳಗೆ ರೆಸಲೂಷನ್ ಕಳುಹಿಸಿದ್ದೆವು. ನಿನ್ನೆ ಕಾರಣಾಂತರ ಗಳಿಂದ ಮಾನ್ಯ ಮಂಖ್ಯಿಮಂತ್ರಿಗಳು ಬರಲಾಗಲಿಲ್ಲ ಅದರಿಂದ ಇವತ್ತು ತಗೆದುಕೊಳ್ಳೋಣವೇ ? ಸೋಮವಾರ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ ? ಮಾನ್ಯ ಕೊಟ್ರುಶೆಟ್ಟಿಯವರು ಬರೆದಿರುವ ಪತ್ರ ಬಂದಿದೆಯೇ ? ಬಂದಿದರೆ ಅದಕ್ಕೆ ಅಧ್ಯಕ್ಷರು ಅದರ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಶ್ರೀ ಡಿ. ದೇವರಾಜ್ ಅರಸ್.—ಅದನ್ನು ಅಧ್ಯಕ್ಷರೇ ತೀರ್ಮಾನ ಮಾಡಲಿ.

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರು ನಿರ್ಣಯ ಮಾಡಿದ ಮೇಲೆ ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಸೋಮವಾರವೆಂದು ಹೇಳಿದರೆ ಹೇಗೆ? ನಿನ್ನೆ ನೀವು ಹೇಳಿದ್ದೀರಿ...

2-00 ಪಿ. ಎಂ.

ಅಧ್ಯಕ್ಷರು.—ನಾನು ಹೇಳಿರುವುದನ್ನು ಬೇಕಾದರೆ ನೀವು ರಿಕಾರ್ಡ್ ತೆಗೆಸಿ ನೋಡಿ. ಮುಖ್ಯಮಂತ್ರಿಗಳವರು ಬಂದ ಮೇಲೆ ಕಾಲ ನಿರ್ಧಾರ ಮಾಡೋಣವೆಂದು ಹೇಳಿದೆನೆ. ಇನ್ನು ಕಾಗದದ ವಿಚಾರದಲ್ಲಿ ಮುಖ್ಯಮಂತ್ರಿಗಳವರನ್ನು ಕೇಳಬೇಕು, ಅದನ್ನು ಕೇಳಿದ ಮೇಲೆ ಅದಕ್ಕೆ ಅನುಮತಿ ಕೊಡಬೇಕು ಎಂದು ಇಷ್ಟೆಲ್ಲಾ ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಮುಖ್ಯಮಂತ್ರಿಗಳು ಬಂದ ಮೇಲೆ ತೆಗೆದುಕೊಳ್ಳೋಣವೆಂದು ಹೇಳಿದ್ದೀರಿ.

ಅಧ್ಯಕ್ಷರು.—ಸೋಮವಾರ ತೆಗೆದುಕೊಳ್ಳೋಣವೆಂದು ಹೇಳಿದ್ದಾರೆ...

ಶ್ರೀ ಡಿ.ದೇವರಾಜ್ ಅರಸ್.—ಸೋಮವಾರ ತೆಗೆದುಕೊಳ್ಳಬೇಕೆಂದು ಹೇಳುತ್ತಾ ಇರತಕ್ಕಂಥಾದ್ದು ಚರ್ಚೆ ಮಾಡಿ ಎಂದು ಅಲ್ಲ. The point is now that it has been raised, what kind of resolution or motion they have moved, I want to know.

MADAM SPEAKER.—Whether he has received the letter I want to know.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಏನು ಹೇಳಿದ್ದಾರೆಂದರೆ..... ನಾವು ಆ ಕಾಗದದ ಮೂಲ ಪ್ರತಿಯನ್ನು ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೇವೆ.

ಶ್ರೀ ಡಿ. ದೇವರಾಜ್ ಅರಸ್.—ಅದಕ್ಕೆ ಯಾರು ರುಜು ಹಾಕಿ ಕೊಟ್ಟಿದ್ದಾರೆ ಎನ್ನುವುದೇ ನಿಮಗೆ ಗೊತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮುಖ್ಯಮಂತ್ರಿಗಳು ಹೇಳಂತ್ತಿರತಕ್ಕಂಥಾದ್ದು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಲೋಕಸಭೆಯ ಸದಸ್ಯರೊಬ್ಬರು ಅವರು ಖುದ್ದಾಗಿ ನಿಂತು ಒಂದು ಪತ್ರ ಬರೆದು ಕೊಟ್ಟಿದ್ದಾರೆ, ಅದರ ಆಧಾರದ ಮೇಲೆ.....

ಶ್ರೀ ಡಿ. ದೇವರಾಜ್ ಅರಸ್.—ಯಾವ ಆಧಾರದ ಮೇಲೆ ಮಾಡಿದ್ದಾರೆ ಎನ್ನುವ ಬಗ್ಗೆ ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮುಖ್ಯಮಂತ್ರಿಗಳವರಿಗೆ ಪತ್ರ ಬರೆದಿದ್ದಾರೋ ಇಲ್ಲವೋ ಎನ್ನುವ ಬಗ್ಗೆ ಹೌದು, ಇಲ್ಲ ಎನ್ನುವುದನ್ನು ಹೇಳುವುದಕ್ಕೆ ೨ ದಿವಸಬೇಕು ಎಂದರೆ ನಮಗೆ ಅರ್ಥವಾಗುವುದಿಲ್ಲ. ಆದುದರಿಂದ ಅವರಿಗೆ ಕಾಗದ ಬರೆದಿದ್ದಾರೋ ಇಲ್ಲವೋ ಎನ್ನುವ ಬಗ್ಗೆ ಸಾಯಂಕಾಲದೊಳಗೆ ಅವರು ಹೇಳಿದರೆ ಉತ್ತಮ ಅದನ್ನು ಬಿಟ್ಟು ಸೋಮವಾರ ನಾವು ತೆಗೆದುಕೊಳ್ಳೋಣವೆಂದು ಹೇಳಿದರೆ ನಾವು ಇನ್ನು ೨-೩ ದಿವಸಗಳು ಕಾಯಬೇಕೇ ?

ಅಧ್ಯಕ್ಷರು.—ಈವಾಗ ರೂಲ್ಸ್ ೧೪೬ರ ಕೆಳಗೆ ಏನು ಕಳುಹಿಸಿದಾರೆ, ಅದು ರೆಜಲ್ಯೂಷನ್ ಅದು ಮೋಷನ್ ಅಲ್ಲ. ಮಾನ್ಯ ಪುಟ್ಟಸ್ವಾಮಿಯವರು ಅವತ್ತಿನ ದಿವಸ ರೆಜಲ್ಯೂಷನ್ ಮಂಡನೆ ಮಾಡುವುದಕ್ಕೆ ಅನುಮತಿ ಕೊಡಿ ಎಂದು ಕೇಳಿದ್ದರು.

SRI D. DEVARAJ URS.—I would not like to discuss it now. Only on Monday we will take it up.

ಅಧ್ಯಕ್ಷರು.—ಮುಖ್ಯಮಂತ್ರಿಗಳವರಿಗೆ ಕಾಗ ಬಂದಿದೆಯೋ ಇಲ್ಲವೋ ಕೇಳಬೇಕಾಗಿ ಬರುತ್ತದೆ. ಅವರನ್ನು ಕೇಳಿದಾಗ ಇದರ ಬಗ್ಗೆ ಸೋಮವಾರ ತೆಗೆದುಕೊಳ್ಳೋಣವೆಂದು ಹೇಳಿದ್ದಾರೆ. I have got to hear the Chief Minister before giving my consent.

ಶ್ರೀ ಕಾಗೋಡು ತಿಮ್ಮಪ್ಪ.—ಸೋಮವಾರ ಚರ್ಚೆಗೆ ತೆಗೆದುಕೊಳ್ಳೋಣ ಆದರೆ.....

ಅಧ್ಯಕ್ಷರು.—ಸೋಮವಾರ ತೆಗೆದುಕೊಳ್ಳೋಣವೆಂದು ಮುಖ್ಯಮಂತ್ರಿಗಳವರು ಹೇಳಿದ್ದಾರೆ. ಆದುದರಿಂದ ನಾನು ನಿಮಗೆ ಅನುಮತಿ ಕೊಡದೇನೆ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರೊಂದಿಗೆ ಕಾಲ ನಿಗದಿ ಮಾಡಿಕೊಳ್ಳಬೇಕಾಗಿ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷಣೀಯವರೇ ತಾವು ವಿರೋಧ ಪಕ್ಷದವರನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳಬಾರದು. ನಾವು ರೂಲ್ ಕೆಳಗೆ ಕ್ರಮಬದ್ಧವಾಗಿ ಕೊಟ್ಟಿದ್ದೇವೆ. ದಯಮಾಡಿ ಈ ವಿಷಯದ ಬಗ್ಗೆ ನಮಗೆ ಹೇಳಲು ಅವಕಾಶ ಮಾಡಿಕೊಡಿ

ಅಧ್ಯಕ್ಷರು.—ರೂಲ್ ೧೪೬ ಕೆಳಗೆ ಏನು ಕೊಟ್ಟಿದ್ದೀರಿ ?

ಶ್ರೀ ಎಚ್. ಡಿ. ದೇವೇಗೌಡ.—ನಾವು ಅದರ ಬಗ್ಗೆ ವಿವರಣೆಯನ್ನು ಕೊಟ್ಟಮೇಲೆ ತಾವು ಬೇಕಾದರೆ ನಿರ್ಣಯ ತೆಗೆದುಕೊಳ್ಳಿ. ನಾವೇನು ಕಾಲವನ್ನು ಅಪವ್ಯಯ ಮಾಡುತ್ತಿಲ್ಲ.

ಅಧ್ಯಕ್ಷರು.—ವಿರೋಧ ಪಕ್ಷದವರನ್ನು ಅನಾದರಣೆ ಮಾಡುತ್ತಿಲ್ಲ. ಆದರೆ ಇವತ್ತು ಅದು ಎಷ್ಟು ದೂರ ಬಂದಿತ್ತು ಎಂದರೆ ಇದನ್ನು ರೆಸಲ್ಯೂಷನ್ ಮುಖಾಂತರ ಮುಂದಕ್ಕೆ ಮಾಡುವುದಕ್ಕೆ ಅನುಮತಿ ಕೊಡಿ ಎಂದು ಶ್ರೀ ಪುಟ್ಟಸ್ವಾಮಿಯವರು ಹೇಳಿದರು. ಅದನ್ನು ಹೇಳಿದಾಗ ನಾನು ಇದರ ಬಗ್ಗೆ ಮುಖ್ಯ ಮಂತ್ರಿಗಳವರನ್ನು ಕೇಳಬೇಕು, ಕೇಳಿದ ಮೇಲೆ ಕಾಲ ನಿಗದಿ ಮಾಡುತ್ತೇನೆಂದು ಹೇಳಿದ್ದೆ.

ಶ್ರೀ ಎಚ್. ಡಿ. ದೇವೇಗೌಡ.—ಅದರ ಬಗ್ಗೆ ಈ ಮನೆಯ ಸಭಾ ನಾಯಕರನ್ನು ಕೇಳಬೇಕಾಗುತ್ತದೆ, ಇಲ್ಲವೆಂದು ಹೇಳಲಿಲ್ಲ. ನಾವು ಯಾವುದೇ ಕಾರ್ಯಕ್ರಮವಾಗಲಿ ನಿಯಮಾವಳಿಗಳ ಪ್ರಕಾರ ನಡೆದುಕೊಂಡು ಹೋಗುತ್ತಿದ್ದೇವೆ, ಅದನ್ನು ಬಿಟ್ಟು ಹೋಗುತ್ತಿಲ್ಲ.

ಅಧ್ಯಕ್ಷರು.—ರೂಲ್ ೧೪೬ರ ಕೆಳಗೆ ಹೇಳಿದ್ದಾರೆ ಅದು ಸರಿ, ಆದರೆ "I have got some work; we will take up on Monday" ಎಂದು ಮುಖ್ಯಮಂತ್ರಿಗಳವರು ಹೇಳಿದ್ದಾರೆ, ಆದುದರಿಂದ ಸೋಮವಾರ ತೆಗೆದುಕೊಳ್ಳೋಣ.

SRI KAGODU THIMMAPPA.—Rule 146 says:

"Save in so far as is otherwise provided in the Constitution or in these rules, no discussion of a matter of general public interest shall take place except on a motion made with the consent of the Speaker".

So, to give the consent of the Speaker, a formal consultation with the Leader does not arise at all. It is purely discretionary power vested with the Speaker.

As per Rule 150:

"The Speaker may, after considering the state of business in the Assembly and in consultation with the Leader of the House, allot a day or days or part of a day for the discussion of any such motion".

This is only for discussion, not for giving permission.

MADAM SPEAKER.—For discussion, I have go to take the consent of the Leader. Is it not?

SRI KAGODU THIMMAPPA.—It is purely a discretionary power vested with the Speaker.

ಅಧ್ಯಕ್ಷರು.—ಅನುಮತಿ ಕೊಡಬೇಕಾದರೆ ನಾನು ಲೀಡರ್‌ನ್ನು ಕೇಳಬೇಕಾಗುತ್ತದೆ, ಅದು ನಮ್ಮ ಅಧ್ಯಾಸ, ಹೌದೋ ಅಲ್ಲವೋ. ಅದೇ ರೀತಿ ಲೀಡರ್‌ನ್ನು ಕೇಳೋಣವೆಂದರೆ ಅವರು ಇರಲಿಲ್ಲ ಮತ್ತು ಹೆಲ್ತ್ ಮಿನಿಸ್ಟರ್‌ರವರೂ ಇರಲಿಲ್ಲ. ಅವರನ್ನು ಈಗ ಕೇಳಿದಾಗ ಸೋಮವಾರ ತೆಗೆದುಕೊಳ್ಳೋಣ ವೆಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ಶಂಕೆ ಏನೆಂದರೆ, to give consent a formal consultation with the Leader does not arise; only for discussion consultation is necessary.

ಅಧ್ಯಕ್ಷರು.—ನಾನು ಅನುಮತಿ ಕೊಡುವುದಕ್ಕೆ ಮುಂಚೆ ನನ್ನ ಮನಸ್ಸಿಗೆ ತೃಪ್ತಿಯಾಗಬೇಕೋ ಬೇಡವೋ?

ಶ್ರೀ ಕಾಗೋಡು ತಿಮ್ಮಪ್ಪ.—ಹೌದು... ಆದರೆ.....

ಅಧ್ಯಕ್ಷರು.—ಇದಕ್ಕೆ ಅನುಮತಿ ಕೊಡಲು ನನ್ನ ಮನಸ್ಸಿಗೆ ತೃಪ್ತಿಯಾಗಬೇಕು, ಮುಖ್ಯಮಂತ್ರಿಗಳವರನ್ನು ಕೇಳಬೇಕು, ಅದಕ್ಕೆ ಅವರು ಸೋಮವಾರ ತೆಗೆದುಕೊಳ್ಳೋಣವೆಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಸೋಮವಾರ ತೆಗೆದುಕೊಳ್ಳೋಣವೆಂದರೆ, ಚರ್ಚೆಗೆ ಎಂದು ನಾನು ತೀರ್ಮಾನಿಸಿದ್ದೇನೆ.

MADAM SPEAKER.—Can I compel the Chief Minister ?

SRI D. DEVARAJ URS.—Can we compel anybody, much less the Speaker to give consent, Let this matter be brought in the House on Monday. That is all what I have stated. Giving consent is left to the Chair. The Chair and the House are guided by certain Rules and formalities.

ಅಧ್ಯಕ್ಷರು.—ಮಾನ್ಯ ದೇವೇಗೌಡರಿಗೆ ಏತಕ್ಕೆ ಕೋಪ ಬಂದಿತೋ ಗೊತ್ತಾಗಲಿಲ್ಲ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮುಖ್ಯಮಂತ್ರಿಗಳವರಿಗೆ ಆ ಪತ್ರ ತಲುಪಿದೆಯೋ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳವರು ಮರೆತಿರಬಹುದು. ಆ ಪತ್ರವನ್ನು ೨೭-೫-೧೯೭೭ ರಂದು ಬರೆದಿರುವುದು.

Taking up notices under Rule 147 and 312 by members

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷಣೀಯವರೇ, ರೂಲ್ ೧೪೭ರ ಪ್ರಕಾರ ಈ ಭೂ ಸಂಧಾರಣೆಗೆ ಸಂಬಂಧಪಟ್ಟಂತೆ.....

ಅಧ್ಯಕ್ಷರು.—ಅದು ಈಗತಾನೇ ಬಂದಿದೆ, ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಯಾವ ವಿಚಾರವನ್ನೇ ಆಗಲಿ, ಅದು ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ನವೀಕರಿಸಿದ್ದು ಪ್ರಸ್ತಾಪವಾದರೆ ಒಳ್ಳೆ ಅನುಕೂಲವಾಗುತ್ತದೆ. ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿಲ್ಲದ ವಿಚಾರಗಳನ್ನೆಲ್ಲಾ ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನಪಟ್ಟರೆ.....

ಅಧ್ಯಕ್ಷರು.—ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುವ ಹಾಗೆ ನಾನು ಅಭ್ಯಾಸ ಮಾಡಿದ್ದೆ. ಆದರೆ, ಕೆಲವು ಅವಸರವಾದ ವಿಚಾರಗಳ ಬಗ್ಗೆ ಮಾನ್ಯ ಮಂತ್ರಿಗಳು ತಯಾರಾಗಿ ಬಂದಿರುತ್ತಾರೆ ; ಕೇಳಬಯಸುವವರೂ ಪ್ರಶ್ನೆ ಕೇಳಲು ತಯಾರಿರುತ್ತಾರೆ. ಆಗ ಅವರಿಬ್ಬರೂ, ನೀವು ಕೇಳಿ, ನಾನು ಹೇಳುತ್ತೇನೆ ಎಂದು ಅವರವರೇ ಮಾತನಾಡಿಕೊಂಡಿರುತ್ತಾರೆ. ಇಂಥಾ ವಿಚಾರಗಳು ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬರದಿರುವಷ್ಟೇ ಅಲ್ಲ, ನನಗೂ ಗೊತ್ತಿರುವುದಿಲ್ಲ.

SRI D. DEVARAJ URS.—There is a lapse on the part of the Treasury Bench. I agree and I apologise for that. We should not put the Chair in the awkward position. Let us follow the Rules and let it be in the Agenda and then the Minister gives a reply.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರಿಂದ ನನಗೆ ಮಾರ್ಗದರ್ಶನ ಬೇಕು. ರೂಲ್ ೩೧೨ರ ಪ್ರಕಾರ ಕಳಂಹಿಸುವ ವಿಚಾರಗಳನ್ನು ಯಾವ ದಿವಸ ಚರ್ಚೆಗೆ ತೆಗೆದುಕೊಳ್ಳಬೇಕೆಂಬುದನ್ನು ಗೊತ್ತು ಮಾಡುವುದು ತಮಗೆ ಸೇರಿದ್ದು. ಆದರೆ, ನಿಲುವಳಿ ಸೂಚನೆಯ ಪ್ರಸ್ತಾಪವನ್ನು ನಾವು ತಮಗೆ ಕಳುಹಿಸಿದಾಗ, ಅದು ಕಾರ್ಯಕಲಾಪಗಳ ಪಟ್ಟಿಯಲ್ಲಿ ಬರುವುದಿಲ್ಲ ವಿಕೆಂದರೆ ಅದಕ್ಕೆ ತಮ್ಮ ಒಪ್ಪಿಗೆಯನ್ನು ಯಾವ ಕಾರಣದಿಂದ ಕೊಡಬೇಕೆನ್ನುವುದು ತಮ್ಮ ಗಮನಕ್ಕೆ ತರಲು ಈ ಸಭೆಯಲ್ಲಿ ಚರ್ಚೆ ಮಾಡಬೇಕಾಗುತ್ತದೆ. ನಾವು ಚರ್ಚೆ ಮಾಡಿದರೂ, ಅದು ಕಾರ್ಯಕಲಾಪಗಳ ಪಟ್ಟಿಯಲ್ಲಿರುವುದಿಲ್ಲ.